

# ಡೆನಿಮ್ ಬೇಡದಿದ್ದರೆ ಚೆಂಬ್ರೆ ಇದೇರಿ!

ದಪ್ಪನೆಯ ಡೆನಿಮ್ ಬಟ್ಟೆ ಬಿಸಿಲಿನ ಧಗೆಯನ್ನು ಇನ್ನಷ್ಟು ಜಾಸ್ತಿ ಮಾಡುತ್ತದೆ. ಆದರ ಬದಲು ಡೆನಿಮ್‌ನಂತೇ ಕಾಣುವ, ಆದರೆ ಹಗುರವಾದ ಹತ್ತಿ ಬಟ್ಟೆಯ ಉಡುಗೆ ಚೆಂಬ್ರೆ ಫ್ಯಾಷನ್ ಲೋಕದಲ್ಲಿ ಹುಯಿಲೆಬ್ಬಿಸದೆ.

■ ಎಸ್.ಹೆಗಡೆ

ಮೃದುವಾದ ತ್ವಚೆಯ ಮೈಗೆ ಮೆತ್ತನೆಯ ಹತ್ತಿ ಬಟ್ಟೆಯ ದಿರಿಸು ಸುತ್ತಿಕೊಂಡರೆ ಎಂತಹ ಬಿರು ಬೇಸಿಗೆಯಲ್ಲೂ ಹಾಯ್ ಎನಿಸದಿರದು. ಚರ್ಮದ ಬೆವರಿನ ರಂಧ್ರಗಳು ತೆರೆದುಕೊಂಡು ಹೊರಸೂಸುವ ಬೆವರ ಧಾರೆ ಸರಾಗವಾಗಿ ಹೀರಿಕೊಂಡು ದೇಹಕ್ಕೆ ಹಿತಾನುಭವ ನೀಡುವ ಹತ್ತಿ ಉಡುಪುಗಳ ಸ್ಥಾನವನ್ನು ಬೇರೆ ಯಾವ ಬಟ್ಟೆಯೂ ಇದುವರೆಗೆ ಭರ್ತಿ ಮಾಡಿಲ್ಲ. ಪರ್ಯಾಯ ವಸ್ತ್ರದ ಯೋಚನೆ ಬಂದಾಗಲೆಲ್ಲ ಉಡುಪು ವಿನ್ಯಾಸಕರು ಹತ್ತಿಯಿಂದಲೇ ಹೊರಹೊಮ್ಮುವ ವೈವಿಧ್ಯಗಳನ್ನು ಮಾರುಕಟ್ಟೆಯಲ್ಲಿ ರಾಶಿ ಹಾಕುತ್ತಿದ್ದಾರೆ.

ಫ್ಯಾಷನ್ ಜಗತ್ತಿನಲ್ಲಿ ಇಂತಹ ಹತ್ತಿಯ ಜನಪ್ರಿಯ ರೂಪವೆಂದರೆ ಡೆನಿಮ್; ಗ್ರಾಹಕರ ಬಾಯಲ್ಲಿ ಸರಾಗವಾಗಿ ಉಲಿಯುವ ಜೀನ್ಸ್ ಉಡುಪು. ಆದರೆ ಬಿಸಿಲಿನ ಉಗ್ರ ರೂಪವನ್ನು ತಡೆದುಕೊಂಡು ತಂಪಿನ ಅನುಭೂತಿ ನೀಡುವ ಸಾಮರ್ಥ್ಯ ಈ ಡೆನಿಮ್ ಎಂಬ ಫ್ಯಾಷನ್ ವಸ್ತ್ರಕ್ಕಂತೂ ಇಲ್ಲವೇ ಇಲ್ಲ. ನೂಲು ಹತ್ತಿಯದಾದರೂ ಅದರ ನೇಯ್ಗೆ ವಿಧಾನವೇ ಬೇರೆ. ನೇಯ್ಗೆಯಲ್ಲಿ ವಾರ್ಪ್ (ಉದ್ದನೆಯ ನೂಲು) ಮತ್ತು ವೆಫ್ಟ್ (ಅಡ್ಡ ನೂಲು) ಪರಸ್ಪರ ಜೋಡಣೆಗೊಳ್ಳುವ ವಿಧಾನ ಜಟಿಲವಾಗಿದ್ದು, ಬಟ್ಟೆ ದಪ್ಪನಾಗಿಯೂ, ಭಾರವಾಗಿಯೂ ಇರುವುದಲ್ಲದೇ, ಒರಟು ಸ್ಪರ್ಶದಿಂದ ಕಂಗೆಡಬೇಕಾಗುತ್ತದೆ.

ಇವೆಲ್ಲ ಕಿರಿಕಿರಿಗಳನ್ನು ನಿವಾರಿಸಿ ಫ್ಯಾಷನ್ ಲೋಕಕ್ಕೆ ದಾಂಗುಡಿ ಇಟ್ಟಿದ್ದು ಚೆಂಬ್ರೆ; ಇದು ಡೆನಿಮ್‌ನ ನಾಜೂಕು ರೂಪ. ಸರಳವಾಗಿ, ಮಾಮೂಲು ಕ್ರಿಸ್‌ಕಾಸ್ ವಿಧಾನದಲ್ಲಿ ನೇಯಲ್ಪಡುವ ಈ ಬಟ್ಟೆಯಲ್ಲಿ ಡೆನಿಮ್‌ನಂತೆ ವಾರ್ಪ್‌ನಲ್ಲಿ ಬಣ್ಣದ ನೂಲು ಹಾಗೂ ವೆಫ್ಟ್‌ನಲ್ಲಿ ಬಿಳಿ ನೂಲು ಬಳಸಿದರೂ ಸರಳ ನೇಯ್ಗೆಯಿಂದಾಗಿ ದಟ್ಟ ರಂಗನ್ನು ಅಪ್ಪಿಕೊಳ್ಳದೆ ತಿಳಿ ವರ್ಣದಲ್ಲಿ ಮಿಂಚುತ್ತದೆ. ಡೆನಿಮ್‌ನ ಅಡಿ ಭಾಗ ತಿಳಿಯಾಗಿದ್ದರೆ, ಚೆಂಬ್ರೆಯಲ್ಲಿ ಮೇಲ್ಗಡೆಯ ಹಾಗೇ ಅಡಿ ಭಾಗವೂ ತಿಳಿ ರಂಗಿನಿಂದ ಕೂಡಿದ್ದು, ಅಷ್ಟೊಂದು ವ್ಯತ್ಯಾಸ ಕಂಡು ಬರುವುದಿಲ್ಲ. ದೂರದಿಂದ ನೋಡುವವರ ಕಣ್ಣಿಗೆ ಕಡು ನೀಲಿ, ಇಂಡಿಗೋ ಬಣ್ಣದಲ್ಲಿ ಡೆನಿಮ್ ತರಹ ಕಂಡರೂ ಸಮೀಪದಿಂದ ಇದರ ತಿಳಿ ರಂಗು ಗೋಚರವಾಗದೇ ಇರದು. ಹೇಗೆಂದರೆ ಹಾಗೆ ಬಾಗಿ ಬಳುಕುವ ಚೆಂಬ್ರೆ ಫ್ಯಾಷನ್ ವಸ್ತ್ರ ವಿನ್ಯಾಸಕಾರರ ಡಾರ್ಲಿಂಗ್ ಎನ್ನಬಹುದು. ಪಾಶ್ಚಾತ್ಯ ಉಡುಗೆಗಳಲ್ಲದೇ ಸಾಂಪ್ರದಾಯಕ ದೇಸಿ ಉಡುಪುಗಳಾದ ಕುರ್ತಿಯಾಗಿಯೂ ಮಾರುಕಟ್ಟೆಯಲ್ಲಿ ಬಿಕರಿಯಾಗುತ್ತಿದೆ. ಈ ಮೆತ್ತನೆಯ, ಬಹುಕಾಲ ಬಾಳಿಕೆ ಬರುವ ಬಟ್ಟೆ ಕೇವಲ

